# ದಿನಾಂಕ: 25-02-2022 ರಂದು ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ಪೊಲೀಸ್ ಠಾಣಾ ಅಧಿಕಾರಿ ಸಿಬ್ಬಂದಿಗಳು ಹಾಗೂ ಇತರೆ ವಲಯ ಅಧಿಕಾರಿ ಮತ್ತು ಸಿಬ್ಬಂದಿಗಳಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ಕಛೇರಿಗಳಲ್ಲಿ ಕೈಗೊಂಡ ಶೋಧನಾ ಕಾರ್ಯಾಚರಣೆ.

ಈ ದಿನ ದಿನಾಂಕ: 25.02.2022 ರಂದು ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸ್ ಅಧೀಕ್ಷಕರು, ಬೆಂಗಳೂರು ನಗರ ವಿಭಾಗ, ಪೊಲೀಸ್ ಅಧೀಕ್ಷಕರು, ಕೇಂದ್ರ ವಲಯ ಬೆಂಗಳೂರು ಮತ್ತು ಪೊಲೀಸ್ ಅಧೀಕ್ಷಕರು (ಕೇಂದ್ರ ಸ್ಥಾನ), ಬೆಂಗಳೂರು ರವರ ನೇತೃತ್ವದಲ್ಲಿ ಒಟ್ಟು 27 ವಿವಿಧ ಬಿಬಿಎಂಪಿ ಕಛೇರಿಗಳ ಮೇಲೆ 11 ಸ್ಥಳಗಳಲ್ಲಿ ಡಿವೈಎಸ್‌ಪಿ, ಪೊಲೀಸ್ ಇನ್ಸ್‌ಪೆಕ್ಟರ್ ರವರನ್ನು ಒಳಗೊಂಡಂತೆ ಒಟ್ಟು 200 ಅಧಿಕಾರಿ/ಸಿಬ್ಬಂದಿಗಳ ವಿವಿಧ ತಂಡಗಳಿಂದ ಏಕ ಕಾಲಕ್ಕೆ ದಾಳಿ ಮಾಡಲಾಗಿರುತ್ತದೆ. ಕಛೇರಿಗಳಲ್ಲಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳ ಪರಿಶೀಲನೆ ಕಾರ್ಯ ಮುಂದುವರೆದಿದ್ದು ಈ ಕೆಳಕಂಡಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ಕಛೇರಿಗಳಗೆ ಅವ್ಯವಹಾರಗಳು ಕಂಡು ಬಂದಿರುತ್ತದೆ.

**ಜಾಹಿರಾತು ವಿಭಾಗ:-**

ಈ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳು ಬಿಬಿಎಂಪಿಯ ವ್ಯಾಪ್ತಿಯಲ್ಲಿ ಜಾಹಿರಾತು ಪ್ರದರ್ಶನಗಳು ಹಾಗು ಪಿಪಿಪಿ ಮಾದರಿಯಲ್ಲಿ ಬಸ್ ತಂಗುದಾಣ, ಪಾದಚಾರಿ ಮಾರ್ಗ (ಸ್ಕೈವಾಕ್) ನಿರ್ಮಾಣ ಮಾಡುವ ಏಜೆನ್ಸಿ ಮತ್ತು ಖಾಸಗಿ ವ್ಯಕ್ತಿಗಳಿಂದ ವಾಸ್ತವವಾಗಿ ಪಾಲಿಕೆಗೆ ಬರಬೇಕಾಗಿರುವ, ವಾರ್ಷಿಕ ಗುತ್ತಿಗೆ, ಬಾಡಿಗೆ, ಜಾಹಿರಾತು ಪ್ರದರ್ಶನ ಮೊತ್ತ ಮತ್ತು ಜಿ.ಎಸ್.ಟಿ ಮೊತ್ತಗಳನ್ನು ನಿಯಮಾನುಸಾರ ಸಂಗ್ರಹಣೆ ಮಾಡದೆ ಅಧಿಕಾರಿಯವರುಗಳು ಏಜೆನ್ಸಿ ಮತ್ತು ಖಾಸಗಿ ವ್ಯಕ್ತಿಗಳೊಂದಿಗೆ ಶಾಮೀಲಾಗಿ ಏಜೆನ್ಸಿರವರೊಂದಿಗೆ ಸೇರಿಕೊಂಡು ಭ್ರಷ್ಟಾಚಾರದಲ್ಲಿ ತೊಡಗಿ ಅಕ್ರಮ ಲಾಭ ಮಾಡಿಕೊಂಡು ಜಾಹಿರಾತು ವಿಭಾಗದಿಂದ ಬರಬೇಕಾದ **ಸುಮಾರು 230 ಕೋಟಿ ರೂ ಬಾಕಿ ಹಣವನ್ನು ವಸೂಲಿ ಮಾಡದೇ ಇರುವುದು ಕಂಡು ಬಂದಿದೆ. ಹಾಗು ಕಳೆದ 1 ವರ್ಷದಿಂದ ಬಸ್ ನಿಲ್ದಾಣಗಳಲ್ಲಿ ಜಾಹಿರಾತಗಳಿಗೆ ಟೆಂಡರ್ ನಿಡದೇ ಸರ್ಕಾರಕ್ಕೆ ಕೋಟ್ಯಾಂತರ ರೂಗಳ ಜಾಹಿರಾತು ಹಣವನ್ನು ನಷ್ಟ ಪಡಿಸಿರುವುದು ಕಂಡು ಬಂದಿರುತ್ತದೆ.**

**ಟಿ.ಡಿ.ಆರ್. ವಿಭಾಗ:-**

ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕು **(ಟಿ.ಡಿ.ಆರ್)** ಸಂಬಂಧಿಸಿದಂತೆ ಬಿಬಿಎಂಪಿ ಅಧಿಕಾರಿಗಳು ಮತ್ತು ಸಿಬ್ಬಂದಿಯವರುಗಳು ಭ್ರಷ್ಟಾಚಾರದಲ್ಲಿ ತೊಡಗಿ ಅವರುಗಳ ಸಂಬಂಧಿಕರ ಮಾಲಿಕತ್ವದ ಕಂಪನಿಗಳೊಂದಿಗೆ, ಮಧ್ಯವರ್ತಿಗಳೊಂದಿಗೆ, ಭೂಮಾಲಿಕರೊಂದಿಗೆ ಸೇರಿಕೊಂಡು ಪರಿಶೀಲನೆ ವೇಳೆಯಲ್ಲಿ ಟಿ.ಡಿ.ಆರ್ ಸಂಬಂಧಪಟ್ಟಂತೆ ಆದೂರು, ರಾಮ್‌ಪುರ, ಸಿಗೇಹಳ್ಳಿ, ವೈಟ್‌ಫೀಲ್ಡ್, ವಾರಣಾಸಿ ಇತ್ಯಾದಿ ಕಡೆಗಳಲ್ಲಿ ಟಿಡಿಆರ್ ಕೊಟ್ಟಿರುವ ಕಡತಗಳಲ್ಲಿ ಅವ್ಯವಹಾರ ಕಂಡು ಬಂದಿದ್ದು ಸದರಿ ಕಡತಗಳನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ.

**ನಗರ ಯೋಜನೆ ವಿಭಾಗ:-**

ಬಿಬಿಎಂಪಿಯ ನಗರ ಯೋಜನಾ ವಿಭಾಗದ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಅಭಿಯಂತರರುಗಳು ಕೆಲವು ಖಾಸಗಿ ವ್ಯಕ್ತಿಗಳಿಗೆ/ಬಹುಮಹಡಿಗಳ ಕಟ್ಟಡ ನಿರ್ಮಾಣ ಮಾಡುವ ಬಿಲ್ಡರ್ಸ್‌ರವರೊಂದಿಗೆ ಸೇರಿಕೊಂಡು ಭ್ರಷ್ಟಾಚಾರದಲ್ಲಿ ತೊಡಗಿರುವುದು ಕಂಡು ಬಂದಿದ್ದು **ಈ ಬಗ್ಗೆ ಸುಮಾರು 21 ಕಡತಗಳನ್ನು ಪರಿಶೀಲಿಸಿದ್ದು ಪ್ರಾಥಮಿಕ ಪರಿಶೀಲನೆಯಿಂದ ಸುಮಾರು ಕೋಟಿ ರೂಗಳ ಅಕ್ರಮ ಎಸಗಿರುವುದು ಕಂಡು ಬಂದಿರುತ್ತದೆ.**

**ಇಂಜಿನಿಯರಿಂಗ್ ವಿಭಾಗ :-**

ಬಿಬಿಎಂಪಿಯ ವ್ಯಾಪ್ತಿಯಲ್ಲಿನ ಅಭಿಯಂತರರುಗಳು ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಭ್ರಷ್ಟಾಚಾರದಲ್ಲಿ ತೊಡಗಿರುವ ಬಗ್ಗೆ ಸುಮಾರು 200 ಕಡತಗಳನ್ನು ಪರಿಶೀಲನೆ ಮಾಡಿದ್ದು ಪ್ರಾಥಮಿಕ ತನಿಖೆಯಿಂದ ಇದುವರೆಗೂ ಕೆಲವು ಕಡತಗಳನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ. **ದಾಖಲಾತಿಗಳ ಪರಿಶೀಲನಾ ಕಾಲದಲ್ಲಿ ಒಂದೇ ಕಾಮಗಾರಿಗೆ ಎರಡು ಬಿಲ್ಲುಗಳನ್ನು ಮಂಜೂರು ಮಾಡಿರುವುದು ಪ್ರಾಥಮಿಕ ಪರಿಶೀಲನೆಯಿಂದ ಕಂಡು ಬಂದಿರುತ್ತದೆ.**

**ಕಂದಾಯ ವಿಭಾಗ:-**

ಬಿಬಿಎಂಪಿ ಅಧಿಕಾರಿ ಮತ್ತು ಸಿಬ್ಬಂದಿಗಳು ಬಿಬಿಎಂಪಿ ವ್ಯಾಪ್ತಿಗೆ ಸೇರಿದ ಕಟ್ಟಡಗಳ ಶುಲ್ಕವನ್ನು ನಿಗದಿ ಪಡಿಸಿದ ಕಂದಾಯವನ್ನು ವಸೂಲು ಮಾಡದೆ ಕಡಿಮೆ ಕಂದಾಯವನ್ನು ವಸೂಲು ಮಾಡಿ ಕಟ್ಟಡ/ಮನೆ ಮಾಲಿಕರಿಗೆ ಅನುಕೂಲ ಮಾಡಿಕೊಟ್ಟು ಅವರಿಂದ ಅಕ್ರಮ ಸಂಭಾವನೆ ಪಡೆಯುವುದಲ್ಲದೆ, ವಾಣಿಜ್ಯ ಕಟ್ಟಡಗಳಿಗೂ ಅಪಾರ್ಟಮೆಂಟ್ ಮತ್ತು ಪೆಂಟ್ ಹೌಸ್‌ಗಳಿಗೂ ಸರಿಯಾದ ಕಂದಾಯವನ್ನು ನಿಗದಿ ಪಡಿಸದೆ, ಕಟ್ಟಡದ ಮಾಲಿಕರೊಂದಿಗೆ ಶಾಮೀಲಾಗುವುದು, ಮತ್ತು ಕಟ್ಟಡದ ನಿರ್ಮಾಣದ ವಿಸ್ತೀರ್ಣವನ್ನು ಕಡಿಮೆ ತೋರಿಸಿ ಕಂದಾಯವನ್ನು ನಿಗಧಿ ಪಡಿಸಿ ಅವರುಗಳಿಂದ ಅಕ್ರಮ ಸಂಭಾವನೆ ಪಡೆದು, ಸರ್ಕಾರಕ್ಕೆ ಪಾವತಿಯಾಗಬೇಕಾದ ಕಂದಾಯವನ್ನು ಕಡಿಮೆ ಪಡೆಯುವ ಮೂಲಕ ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟುಮಾಡಿರುವುದು ಅಲ್ಲದೆ ಬಿಬಿಎಂಪಿಯ ಕಂದಾಯ ಅಧಿಕಾರಿಗಳು ವ್ಯಕ್ತಿಗಳಿಗೆ ಮಾಲಿಕತ್ವ ಇಲ್ಲದೆ ಇದ್ದರೂ ಸಹ ಖರಾಬು, ಸರ್ಕಾರ ಜಾಗವನ್ನು ಸೇರಿಸಿ ಖಾತೆಯನ್ನು ಮಾಡಿಕೊಟ್ಟು ಅವರಿಂದ ಅಕ್ರಮ ಲಾಭ ಮಾಡಿಕೊಳ್ಳುತ್ತಿರುವುದು ದಾಖಲಾತಿಗಳ ಪರಿಶೀಲನೆಯಿಂದ ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. **ಪರಿಶೀಲನಾ ಕಾಲದಲ್ಲಿ ಒಂದು ಖಾಸಗಿ ಆಸ್ಪತ್ರೆಯಿಂದ, ಹಾಗೂ ಎರಡು ಮಾಲ್‌ಗಳಿಂದ ಕೋಟ್ಯಾಂತರ ರೂಗಳ ತೆರಿಗೆ ಹಣ ಸಂಗ್ರಹಿಸಿದೇ ಸರ್ಕಾರಕ್ಕೆ/ಬಿಬಿಎಂಪಿ ಕೋಟ್ಯಾಂತರೂಗಳ ನಷ್ಟವುಂಟು ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.**

ಪ್ರಕರಣದ ತನಿಖಾ ಕಾಲದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿವಿಧ ವಿಭಾಗಗಳಿಗೆ ಸಂಬಂಧಪಟ್ಟಂತೆ 45 ಕಡತಗಳನ್ನು ಅಮಾನತ್ತು ಪಡಿಸಿಕೊಂಡಿದ್ದು ಪ್ರಾಥಮಿಕ ತನಿಖೆಯಿಂದ ಸರ್ಕಾರಕ್ಕೆ/ಬಿಬಿಎಂಪಿ ಬೊಕ್ಕಸಕ್ಕೆ ಕೋಟ್ಯಾಂತರ ರೂ ತೆರಿಗೆ ಹಣ ವಂಚನೆ ಸೇರಿದಂತೆ ವಿವಿಧ ಇಲಾಖೆಯಲ್ಲಿ ಸಾರ್ವಜನಿಕರ ಹಣ ದುರುಪಯೋಗ ಆಗಿರುವುದು ಪ್ರಾಥಮಿಕ ತನಿಖೆಯಿಂದ ಕಂಡು ಬಂದಿರುತ್ತದೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳ ಪರಿಶೀಲನೆ ಕಾರ್ಯ ಮುಂದುವರೆದಿದೆ.